ದಿನಾಂಕಃ **09-02-2024** ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲು : **10** ರಿಂದ **12** ನೇ ಪ್ರತಿವಾದಿಗಳ ಪರ ವಕೀಲರಿಂದಃ-

ದಾವಾ ಸ್ವತ್ತುಗಳು ಮೂಲತಃ ನನ್ನ ತಾತ ಟಿ. ಕೊಟ್ರಗೌಡ್ರರವರ ಹೆಸರಿನಲ್ಲಿದ್ದವು. ನನ್ನ ತಾತ ಮರಣ ಹೊಂದಿದ್ದಾರೆ. 1 ನೇ ಪ್ರತಿವಾದಿ ನನ್ನ ಅಜ್ಜಿ. ನನ್ನ ತಾತ ಮತ್ತು ಅಜ್ಜಿಗೆ ಬಸವನಗೌಡ , ರಾಮನಗೌಡ , ಮಂಜುನಾಥ ಗೌಡ , ಸಂಗನಗೌಡ , ಚೆನ್ನಬಸವನಗೌಡ , ವಿಜಯಲಕ್ಷ್ಮೀ ಹಾಗೂ ಮಂಜುಳಾ ಎಂಬ ಮಕ್ಕಳು ಇದ್ದಾರೆ. ದಿಃ 09.06.2000 ರಂದು ನನ್ನ ತಾಯಿ ಮತ್ತು 1 ನೇ ಪ್ರತಿವಾದಿ ಹಾಗೂ ಆಕೆಯ ಮಕ್ಕಳೆಲ್ಲರು ಸೇರಿ ಕುಟುಂಬದ ಸ್ವತ್ತುಗಳನ್ನು ವಿಭಾಗಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸದರಿ ವಿಭಾಗದಲ್ಲಿ ದಾವಾ ಶೆಡ್ಯೂಲ್ 2 ನೇ ಸ್ವತ್ತು 1 ನೇ ಪ್ರತಿವಾದಿಯ ಭಾಗಕ್ಕೆ ಬಂದಿದೆ ಎಂದರೆ ಸಾಕ್ಷಿಯು ನಮಗ್ಯಾರಿಗೂ ಸಮಪಾಲು ನೀಡಿಲ್ಲ ಎಂದು ಸಾಕ್ಷಿ ಹೇಳಿದ್ದಾರೆ. ಬಸವನಗೌಡರವರಿಗೆ ದಾವಾ ಶೆಡ್ಯೂಲ್ 4, 6 ಮತ್ತು 11 ನೇ ಸ್ವತ್ತುಗಳು ಬಂದಿವೆ ಎಂದರೆ ವಿಭಾಗ ಯಾವಾಗ ನಡೆದಿದೆಯೋ ನನಗೆ ಗೊತ್ತಿಲ್ಲ , ಸಮಪಾಲು ನೀಡಿಲ್ಲ ಎಂದು ಸಾಕ್ಷಿ ಹೇಳಿದ್ದಾರೆ. ಮೋರಗೇರಿಯಲ್ಲಿರುವ ನನ್ನ ಅಜ್ಜನ ಸ್ವತ್ತು ರಾಮನಗೌಡರವರ ಭಾಗಕ್ಕೆ ಬಂದಿದೆ ಎಂದರೆ ಸರಿ. ದಾವಾ ಶೆಡ್ಯೂಲ್ 3, 5 ಮತ್ತು 8 ನೇ ಸ್ವತ್ತುಗಳು ಸದರಿ ವಿಭಾಗದಲ್ಲಿ ಸಂಗನಗೌಡರವರ ಭಾಗಕ್ಕೆ ಬಂದಿದೆ ಎಂದರೆ ವಿಭಾಗವಾಗಿರುವುದು ನಿಜ, ವಿಭಾಗವಾಗಿಲ್ಲ ಎಂದು ಸಾಕ್ಷಿಯು ಮೇಲಿನಂತೆ ಉತ್ತರಿಸಿದ್ದಾರೆ. ದಾವಾ ಶೆಡ್ಯೂಲ್ 1 ನೇ ಸ್ವತ್ತನ್ನು ಚೆನ್ನಬಸವನಗೌಡರವರಿಗೆ ನೀಡಲಾಗಿದೆ ಎಂದರೆ ಸಾಕ್ಷಿಯು ಮೇಲಿನಂತೆಯೇ ಉತ್ತರಿಸಿದ್ದಾರೆ. ದಾವಾ ಶೆಡ್ಯೂಲ್ 9 ಮತ್ತು 10 ನೇ ಸ್ವತ್ತುಗಳು ನನ್ನ ತಾಯಿಯ ಭಾಗಕ್ಕೆ ಬಂದಿದೆ ಎಂದರೆ ಸರಿ. ಸದರಿ ಸ್ವತ್ತುಗಳು 2001-02 ನೇ ಸಾಲಿನಲ್ಲಿ ನನ್ನ ತಾಯಿಯ ಹೆಸರಿಗೆ ಖಾತೆಯಾಗಿವೆ ಎನ್ನುವುದು ಸರಿ.

***10*** ರಿಂದ ***12*** ನೇ ಪ್ರತಿವಾದಿಗಳ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೇಳಿದರು**,** ನೀಡಲಾಯಿತು**.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಇದೆ.

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಹೂವಿನ ಹಡಗಲಿ.**